ಪೌರತ್ವ ಶಿಕ್ಷಣ | ವಿಧಾನಗಳ ಕುರಿತು ಪರ್ಯಾಲೋಚನೆ

ಅರವಿಂದ ಸರ್ದಾನಾ

ನಾವು 1980ರ ಸುಮಾರಿಗೆ 'ಏಕಲವ್ಯ'ದಲ್ಲಿ ಮಾಧ್ಯಮಿಕ ಶಾಲೆಗಳಗಾಗಿ ಸಮಾಜ ವಿಜ್ಞಾನದ ಕುರಿತು ಮೊದಲ ಬಾರಿಗೆ ಕೆಲಸ ಪ್ರಾರಂಭಿಸಿದಾಗ, ಆ ಕಾಲದ ರಾಜ್ಯ ಪಠ್ಯಪುಸ್ತಕಗಳಲ್ಲಿ ಪೌರನೀತಿಯ ಕುರಿತು ಇದ್ದ ವಿಭಾಗವನ್ನು ಅರ್ಥ ಮಾಡಿ-ಕೊಳ್ಳುವುದು ಕಷ್ಟಕರವಾಗಿತ್ತು. ಆಗಿನ ಅಧ್ಯಾಯಗಳು ಒಂದಷ್ಟು ನಿಯಮಗಳು ಮತ್ತು ಕಾರ್ಯವಿಧಾನಗಳ ಕಂತೆಗಳಾಗಿದ್ದವು ಅಥವಾ 'ಅಜ್ಞಾನಿ ಮತ್ತು ಅಶಿಕ್ಷಿತ' ನಾಗರಿಕರಿಗೆ ಇರುವ ನೈತಿಕ ವಿಜ್ಞಾನದ ಪಾಠಗಳಾಗಿದ್ದವು. ಅಧ್ಯಾಯಗಳ ಅನುಕ್ರಮಗಳು ಸರಿಸುಮಾರು ಸಂವಿಧಾನದ ಶೀರ್ಷಿಕೆಯನ್ನು ಅನುಸರಿಸುತ್ತಿದ್ದವು ಹಾಗು ಅನೇಕ ಸಾಲುಗಳನ್ನು ಯಥಾವತ್ತಾಗಿ ಸಂವಿಧಾನದ ಕಡತದಿಂದ ಅಕ್ಷರಶಃ ತೆಗೆದುಕೊಳ್ಳಲಾಗಿತ್ತು. ಇವೆಲ್ಲವೂ ಸರಿಯಾಗಿಯೇ ಇತ್ತು. ಆದರೆ ವಿದ್ಯಾರ್ಥಿಗಳ ಪಾಲಿಗೆ ಪ್ರಯೋಜನಕ್ಕೆ ಬಾರದ ವಿಚಾರವಾಗಿತ್ತು. ಪ್ರಮುಖ ಪ್ರಶ್ನೆಗಳನ್ನು ಉರು ಹೊಡೆಯುವುದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪಾಲಿಗೆ ತ್ವರಿತ ಮತ್ತು ಶೀಘ್ರ ಕಲಿಕಾ ವಿಧಾನವಾಗಿ ಮಾರ್ಪಟ್ಟಿತ್ತು.

ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದುಕಿನ ಸಂಗತ ವಿಷಯ ವಸ್ತುಗಳನ್ನು ಒಳಗೊಳ್ಳುವ ಮೂಲಕ ಇದರ ವ್ಯಾಪ್ತಿಯನ್ನು ವೃದ್ಧಿಸುವ ಪರ್ಯಾಯ ಚೌಕಟ್ಟನ್ನು ಪೌರನೀತಿಗೆ ಪೂರಕವಾಗಿ ನಾವು ಅಳವಡಿಸಿದೆವು. ಸಮಕಾಲೀನ ರಾಜಕೀಯ ಬದುಕು ಮತ್ತು ಸಂಸ್ಥೆಗಳ ಕಾರ್ಯನಿರ್ವಹಣೆಯತ್ತ ಗಮನಹರಿಸಿ, ಕಾನೂನಿನ ಆದರ್ಶಗಳಿಗೆ ವ್ಯತಿರಿಕ್ತವಾಗಿ ಅವು ಹೇಗೆ ಕಾರ್ಯೋನ್ಮುಖವಾಗಿವೆ ಎನ್ನುವುದನ್ನು ಚರ್ಚಿಸಲು ನಿರ್ಧರಿಸಿದೆವು. ಇದೆಲ್ಲವೂ 1986ರಿಂದ 2002ರ ತನಕ ನಡೆದ 'ಏಕಲವ್ಯ'ದ ನವೀನ ಸಮಾಜ ವಿಜ್ಞಾನ ಕಾರ್ಯಕ್ರಮದ ಭಾಗವೆನಿಸಿತ್ತು. ನಾವು ಸಮಾಜ ವಿಜ್ಞಾನ ಪಠ್ಯಪುಸ್ತಕಗಳು, ಶಿಕ್ಷಕರ ತರಬೇತಿ ಮತ್ತು ಮೌಲ್ಯಮಾಪನದ ಹೊಸ ವಿಧಾನಗಳ ಕುರಿತು ಕೆಲಸ ಮಾಡಿದೆವು. ಆದರೆ, ನಮ್ಮ ಶೈಕ್ಷಣಿಕ ಸಂಸ್ಕೃತಿಯಲ್ಲಿ ಎರಡು ವಿರುದ್ಧ ದೃಷ್ಟಿಕೋನಗಳು ಉಳಿದುಬಿಟ್ಟಿವೆ. ಮೊದಲನೆಯದು, ಇತರರನ್ನು ಸುಶಿಕ್ಷಿತರ-ನ್ನಾಗಿಸಲು ಅಥವಾ ಅಜ್ಞಾನದ ಕೊರತೆಯನ್ನು ನೀಗಿಸಲು ಕರೆ ನೀಡುವ ನಿಷ್ಕ್ರಿಯ ಪೌರತ್ವ (passive citizenship). ಈ ದೃಷ್ಟಿಕೋನವನ್ನು ವಿಶಾಲ ಸಮುದಾಯವು ಒಪ್ಪಿಕೊಂಡಿದ್ದು, ಪೌರನೀತಿ ತರಗತಿಗಳಲ್ಲಿ ಇಂತಹ ವಾದಗಳನ್ನು ಮತ್ತೆಮತ್ತೆ ಪುನರಾವರ್ತಿಸಿ ಅನೇಕ ವರ್ಷಗಳಿಂದ ಇದನ್ನು ಬಲಪಡಿಸುತ್ತಲೇ ಬಂದಿದೆ. ಇವರಲ್ಲಿ, ಸರ್ಕಾರವನ್ನು ಮುಕ್ತವಾಗಿ ಟೀಕಿಸಲು ಆಗದ ಅಧಿಕಾರಿಗಳಂತೆ ವರ್ತಿಸುತ್ತಿದ್ದ ಅನೇಕ ಸರ್ಕಾರಿ ಶಾಲಾ ಶಿಕ್ಷಕರೂ ಸೇರಿದ್ದರು.

ಎರಡನೇ ಬಗೆಯ ದೃಷ್ಟಿಕೋನವನ್ನು ತಳೆದವರೆಂದರೆ ಸರ್ಕಾರಿ ಶಾಲೆಗಳ ಸಣ್ಣ ಪ್ರಮಾಣದ ಶಿಕ್ಷಕರ ಗುಂಪು. ಇವರು ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ವೈಫಲ್ಯಗಳನ್ನು ಮುಕ್ತವಾಗಿ ಚರ್ಚಿಸಲು ಸಿದ್ಧರಿರುವ, ತಿಳುವಳಿಕೆಯುಳ್ಳ ಮತ್ತು ವಿಮರ್ಶಾತ್ಮಕ ಪೌರತ್ವದಲ್ಲಿ ನಂಬಿಕೆ ಹೊಂದಿದವರಾಗಿದ್ದಾರೆ. ವಿಮರ್ಶಾತ್ಮಕ ಪೌರತ್ವದ ದೃಷ್ಟಿಕೋನವು (critical citizenship perspective) ಸೀಮಿತ ಪ್ರಮಾಣದಲ್ಲಿ ಸ್ವೀಕೃತಗೊಂಡಿದೆ. ಇದರಲ್ಲಿ, ಎಲ್ಲಾ ನಾಗರಿಕರನ್ನು ಸಮಾನರೆಂದು ಪರಿಗಣಿಸಲಾಗುತ್ತದೆ. ಹೀಗಾಗಿ ಬಡ ಮತ್ತು ಅನನುಕೂಲತೆಗೆ ಈಡಾದ ವರ್ಗಗಳನ್ನು ಕ್ಷುಲ್ಲಕವಾಗಿ ಕಾಣಲು ಸಾಧ್ಯವಿಲ್ಲ. ಅವರ ಬಡತನ ಅಥವಾ ಅವರಿಗೆ ಉಂಟಾದ ಅನ್ಯಾಯಕ್ಕೆ ಅವರನ್ನೇ ದೂರುವುದಿಲ್ಲ. ಅನ್ಯಾಯಕ್ಕೆ ಕಾರಣವಾದ ಸಾಮಾಜಿಕ ಮತ್ತು ಐತಿಹಾಸಿಕ ಕಾರಣಗಳು, ಸಮಕಾಲೀನ ಪ್ರಪಂಚದಲ್ಲಿ ಉಂಟಾಗುವ ಅಸಮಾನತೆ ಅಥವಾ ಭ್ರಾತೃತ್ವದ ಕೊರತೆಯನ್ನು ಅತ್ಯಂತ ಸೂಕ್ಷ್ಮ ರೀತಿಯಲ್ಲಿ ಚರ್ಚಿಸಲಾಗುತ್ತದೆ.

ಈ ವಿರೋಧಾಭಾಸದ ದೃಷ್ಟಿಕೋನಗಳು, ಶಿಕ್ಷಕರೊಂದಿಗೆ ಹಾಗು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಶೈಕ್ಷಣಿಕ ಆಡಳಿತಗಾರರೊಂದಿಗೆ ಚರ್ಚಿಸುವಾಗ ಬೆಳಕಿಗೆ ಬರುತ್ತವೆ. ಅಲ್ಲದೆ ಗಮನಾರ್ಹವಾದ ರೀತಿಗಳಲ್ಲಿ ಪಠ್ಯಕ್ರಮದ ವಿನ್ಯಾಸ ಮತ್ತು ಪ್ರಕ್ರಿಯೆಯನ್ನು ಬಾಧಿಸುತ್ತಿದ್ದು, ಪಠ್ಯಕ್ರಮ ಸುಧಾರಣಾ ಪ್ರಕ್ರಿಯೆಯಲ್ಲಿ ವಿಮರ್ಶಾತ್ಮಕ ಪೌರತ್ವಕ್ಕೆ ಪ್ರತಿರೋಧ ಒಡ್ಡಲಾಗುತ್ತದೆ. ಹೀಗಾಗಿ, ಒಬ್ಬರ ದೃಷ್ಟಿಕೋನವನ್ನು ಇನ್ನೊಬ್ಬರ ಮೇಲೆ ಹೇರದೆ ಇರುವಂತಾಗಲು ಆಳವಾಗಿ ತೊಡಗಿಸಿಕೊಳ್ಳುವ ಮತ್ತು ಸಂವಾದದ ವಾತಾವರಣ ಉಂಟುಮಾಡುವ ಅಗತ್ಯವಿದೆ. ಶಿಕ್ಷಕರ ಜೊತೆಗಿನ ಅಧಿವೇಶನಗಳಲ್ಲಿ ಹೊಮ್ಮಿದ ಚರ್ಚೆಯ ಕೆಲವು ಉದಾಹರಣೆಗಳನ್ನು ನೆನಪಿಸುವುದಾದರೆ:

ರಾಜಸ್ಥಾನದಲ್ಲಿ ನಡೆದ ಶಿಕ್ಷಕರ ತರಬೇತಿ ಕಾರ್ಯಕ್ರಮವೊಂದರಲ್ಲಿ, ಶಿಕ್ಷಕರ ಸಮೂಹವೊಂದು ಪ್ರತಿಭಟನೆ ವ್ಯಕ್ತಪಡಿಸಿತು. ಗ್ರಾಮಸಭೆಯಲ್ಲಿ ನೇರ ಪ್ರಜಾತಾಂತ್ರಿಕತೆಯ ಪರಿಕಲ್ಪನೆಗೆ ಸಂಬಂಧಿಸಿದ ಊಹನಾತ್ಮಕ ಪ್ರಶ್ನೆಗಳನ್ನು (hypothetical questions) ಚರ್ಚಿಸುವುದಿಲ್ಲ ಎಂದು ಇವರು ಪಟ್ಟು ಹಿಡಿದಿದ್ದರು. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ನಿಯಮಗಳಿಗೆ ಸಂಬಂಧಿಸಿದಂತೆ ಚರ್ಚೆಯನ್ನು ಮಿತಿಗೊಳಿಸಬೇಕು ಎಂದು ಅವರು ಒತ್ತಾಯಿಸಿದರು. ಹಲವಾರು ವರ್ಷಗಳಿಂದ ಅವರು ಪಡೆದ ಪೌರನೀತಿಯ ಶಿಕ್ಷಣವು, ಆ ವಿಷಯವನ್ನು ಮುಂದಿನ ಜನಾಂಗಕ್ಕೆ ಹಸ್ತಾಂತರಿಸಬೇಕಾದ ಕಠಿಣ ನಿಯಮಗಳ ಸಂಗ್ರಹದಂತೆ ಕಾಣುವಂತೆ ಮಾಡಿತ್ತು.

ಛತ್ತೀಸ್‌ಗಢದಲ್ಲಿ, ಶಿಕ್ಷಕರ ಒಂದು ಸಮೂಹವು, ರಾಜ್ಯದಿಂದ ಆಗುವ ಕಾರ್ಮಿಕರ ಋತುಕಾಲಿಕ ವಲಸೆಯನ್ನು, ಪಲಾಯನ (ಬಲವಂತದ ವಲಸೆ) ಎಂಬ ಶಬ್ದವನ್ನು ಬಳಸದೆ ಉಲ್ಲೇಖಿಸಬೇಕು ಎಂದು ಪಟ್ಟು ಹಿಡಿಯಿತು. ಯಾವುದೇ ಪಲಾಯನ ನಡೆಯುತ್ತಿಲ್ಲ ಎಂದು ರಾಜ್ಯವು ಘೋಷಿಸಿತ್ತು, ಆದರೆ ರಾಯ್‌ಪುರ ಮತ್ತು ಬಿಲಾಸ್ಪುರದ ರೈಲು ನಿಲ್ದಾಣಗಳು, ಹತಾಶರಾಗಿ ದೆಹಲಿಯ ರೈಲು ಹತ್ತಲು ನಿಂತಿದ್ದ ಜನರಿಂದ ತುಂಬಿ ಹೋಗಿದ್ದವು.

ಜೀತಕಾರ್ಮಿಕ ಸಮಸ್ಯೆಗಳು, ಕೌಟುಂಬಿಕ ಹಿಂಸೆ ಅಥವಾ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಯಾವುದೇ ವಿಚಾರಗಳನ್ನು ಪಠ್ಯಕ್ರಮದ

ವಿನ್ಯಾಸದ ಭಾಗವಾಗಿ ಸಮಾಲೋಚಿಸುವುದು ಕಷ್ಟದ ವಿಷಯವಾಗಿತ್ತು. ನಿಜಾಂಶವನ್ನು ತಳ್ಳಿಹಾಕಲು ಆಗದೆ ಇದ್ದಾಗ, ಅಥವಾ ನಾವು ಸರ್ಕಾರಿ ವರದಿಗಳನ್ನು ಬಳಸಿದಾಗ, ಇಂತಹ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಈ ಮಕ್ಕಳು ಇನ್ನೂ ಎಳೆಯರು ಎನ್ನುವ ಸಬೂಬನ್ನು ಮುಂದಿಟ್ಟು ವಿಷಯವನ್ನು ಮುಚ್ಚಿಹಾಕಲಾಗುತ್ತಿತ್ತು. ಇವುಗಳನ್ನು ಬಿಟ್ಟುಬಿಡುವುದು ಒಳ್ಳೆಯದು ಏಕೆಂದರೆ, ಇವು ಈ ಸೂಕ್ಷ್ಮ ಮನಸ್ಸುಗಳಿಗೆ ಹಾನಿ ಮಾಡುತ್ತವೆ. ನಾವು ಆದರ್ಶಗಳನ್ನಷ್ಟೇ ಮಾತನಾಡುತ್ತೇವೆ, ಕಠೋರ ವಾಸ್ತವವನ್ನು ನಾವು ಎಂದಿಗೂ ಚರ್ಚಿಸುವುದಿಲ್ಲ ಎಂದು ಇತರರು ಹೇಳುತ್ತಿದ್ದರು. ಪಠ್ಯಕ್ರಮದ ಆ ಚೌಕಟ್ಟು, ಅಧ್ಯಾಯಗಳು ಮತ್ತು ಉದಾಹರಣೆಗಳನ್ನು ನಿರ್ಧರಿಸುವ ಮೊದಲು ದೀರ್ಘವಾದ ಚರ್ಚೆ ಮತ್ತು ಸಂಧಾನದ ಅಗತ್ಯವಿರುತ್ತಿತ್ತು.

ಭಿನ್ನ ನಂಬಿಕೆಯ ನೆಲೆಯನ್ನು ಹೊಂದಿರುವ ಎರಡು ಪಂಗಡಗಳ ಸಂಖ್ಯೆಯಲ್ಲಿ ಅಂತರವಿದ್ದರೂ ಭಿನ್ನತೆಯಿರುವುದಂತೂ ಸತ್ಯ. ಹೊಸ ಮತ್ತು ಮಾರ್ಪಡಿಸಿದ ಪಠ್ಯಪುಸ್ತಕಗಳಿಗೆ ಚಾಲನೆ ನೀಡಿದಾಗ, ಶಿಕ್ಷಕರೊಂದಿಗೆ ವಿಸ್ತೃತ ಪ್ರಮಾಣದ ಚರ್ಚೆಗಳು ನಡೆಯುವುದಿಲ್ಲ. ಇದು ಆಗದಿದ್ದರೆ, ಉತ್ತಮ ಪಠ್ಯಕ್ರಮ ಸಾಮಗ್ರಿಗಳು ದೊರೆತರೂ, ತರಗತಿ ಕೊಠಡಿಯ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ.

ನಿಷ್ಕ್ರಿಯ ಮತ್ತು ವಿಮರ್ಶಾತ್ಮಕ ಪೌರತ್ವ

ನಿಷ್ಕ್ರಿಯ ಪೌರತ್ವದ ದೃಷ್ಟಿಕೋನ
ನಾಯಕತ್ವ ವಹಿಸಿಕೊಂಡವರು ತಾಳುವ ನಿಷ್ಕ್ರಿಯ ಪೌರತ್ವದ ದೃಷ್ಟಿಕೋನವು ಹೊಸ ಉಪಕ್ರಮಗಳನ್ನು ಹಳಿ ತಪ್ಪಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಎರಡು ದೃಷ್ಟಾಂತಗಳನ್ನು ಪರಿಗಣಿಸಿ:

ನಮ್ಮ ಕಾರ್ಯಕ್ರಮಗಳನ್ನು ವಿರೋಧಿಸುತ್ತಿದ್ದ, ನಮ್ಮ ಕಾರ್ಯ-ಕ್ಷೇತ್ರದಲ್ಲಿದ್ದ ಜೋರುಮಾತಿನ ರಾಜಕಾರಣಿಯೊಬ್ಬರು, ನಮ್ಮ ಅಧ್ಯಾಯಗಳು ಚುನಾಯಿತ ಪ್ರತಿನಿಧಿಗಳ ವಿರುದ್ಧ ಜನರು ದಂಗೆ ಏಳುವಂತೆ ಪ್ರಚೋದಿಸುತ್ತವೆ ಎಂದು ಹೇಳಿದರು. ಏಕೆಂದರೆ ಪಂಚಾಯತ್‌ಗೆ ಸಂಬಂಧಿಸಿದ ಅಧ್ಯಾಯದಲ್ಲಿ ಜನರು ಶಾಸಕರ ಮನೆಯ ಹೊರಗಡೆ ಪ್ರತಿಭಟಿಸುವುದನ್ನು, ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುವುದನ್ನು ತೋರಿಸಲಾಗಿತ್ತು. ಇನ್ನೊಂದೆಡೆ, ಸರ್ಕಾರಿ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಅಂಗೀಕರಿಸಬೇಕಿದ್ದ ಮಧ್ಯಪ್ರದೇಶದ ಉದಾರವಾದಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ನಮಗೆ ಒಮ್ಮೆ, 'ನೀವು ಸರ್ಕಾರದ ಗುಣ-ದೋಷಗಳನ್ನು ವಿಮರ್ಶಿಸಬಹುದು, ಆದರೆ ಲೇವಡಿ ಮಾಡಬೇಡಿ' ಎಂದು ಸಲಹೆ ನೀಡಿದ್ದರು. ಇಂತಹ ಉದಾರವಾದಿ ನಿಲುವುಗಳ ಕಾರಣದಿಂದ ಸರ್ಕಾರದ ಜೊತೆಗಿನ ಸಹಭಾಗಿತ್ವದ ಕಾರ್ಯಕ್ರಮಗಳು ಅಷ್ಟು ಕಾಲ ಮುಂದುವರಿದವು.

ಸುಮಾರು 2000ನೇ ಇಸವಿಯ ಹೊತ್ತಿಗೆ, ಏಕಲವ್ಯದ ಸಾಮಾಜಿಕ ವಿಜ್ಞಾನ ಪಠ್ಯಪುಸ್ತಕಗಳನ್ನು ಇಂದೋರ್‌ನ ಕೆಲವು ಉನ್ನತ ವರ್ಗದ ಶಾಲೆಗಳು ಅಳವಡಿಸಿಕೊಂಡವು. ಆರಂಭದಲ್ಲಿ ಶಿಕ್ಷಕರು ಒಂದಷ್ಟು ಹಿಂಜರಿಕೆ ತೋರಿದರು. ಆದರೆ ನಂತರ ತರಗತಿಗಳನ್ನು ಆನಂದಿಸಲು ಪ್ರಾರಂಭಿಸಿದರು. ಮುಂದಿನ ಶೈಕ್ಷಣಿಕ ಅವಧಿಯಲ್ಲಿ, ಈ ಶಾಲೆಯ ಪ್ರಾಂಶುಪಾಲರು ಬದಲಾದರು. ಹೊಸ ಮುಖ್ಯಸ್ಥರು, ಈ ಉಪಕ್ರಮದ ಕುರಿತು ಅಭಿಪ್ರಾಯ ಕೇಳಲು ಶಿಕ್ಷಕರನ್ನೆಲ್ಲ ಕರೆದರು. ಶಿಕ್ಷಕರು ಪ್ರಾಮಾಣಿಕರಾಗಿದ್ದರು ಹಾಗು ಈ ಕಾರ್ಯಕ್ರಮ ಮುಂದುವರಿಯಬೇಕೆಂದು ತಮ್ಮ ಬೆಂಬಲ ವ್ಯಕ್ತಪಡಿಸಿದರು. ಆದರೆ ಪ್ರಾಂಶುಪಾಲರು ಈ ಕಾರ್ಯಕ್ರಮವನ್ನು ನಿಲ್ಲಿಸಲು ಬೇಕಾಗುವ 'ಪುರಾವೆ' ಹುಡುಕುತ್ತಿದ್ದಾರೆ ಎಂದು ಉಪಪ್ರಾಂಶುಪಾಲರು ಮೆಲ್ಲನೆ ಶಿಕ್ಷಕರಿಗೆ ತಿಳಿಸಿದರು. ಆದರೆ ಮುಂದಿನ ಬಾರಿ ಇದೇ ಪ್ರಶ್ನೆಯನ್ನು ಕೇಳಿದಾಗ, ತಮ್ಮ ಕೆಲಸವನ್ನು ಉಳಿಸಿಕೊಳ್ಳುವುದಕ್ಕಾಗಿ, ಹಿಂದಿನ ಬದ್ಧತೆಯನ್ನು ತೋರುವುದಿಲ್ಲ ಎಂದು ಶಿಕ್ಷಕರು ನಮಗೆ ಹೇಳಿದರು. ಶಿಕ್ಷಕರಿಗೆ ತಮ್ಮ ಕೆಲಸದಲ್ಲಿ ಪ್ರಾಮಾಣಿಕತೆ ಬೇಕಿರುವುದರಿಂದ ಹಾಗು ವಿಮರ್ಶಾತ್ಮಕ ದೃಷ್ಟಿಕೋನದ ಇಂತಹ ಪಠ್ಯಪುಸ್ತಕಗಳು ಪಾಶ್ಚಾತ್ಯ ಮಾರ್ಗವನ್ನು ಹೊಂದಿದ್ದು ನಮ್ಮ ದೇಶಕ್ಕೆ ಅಪ್ರಸ್ತುತವಾಗಿವೆ ಎಂಬ ಅಭಿಪ್ರಾಯಕ್ಕೆ ನಾಯಕತ್ವವು ಜೋತುಬಿದ್ದ ಕಾರಣ ಈ ಕಾರ್ಯಕ್ರಮವನ್ನು ನಿಲ್ಲಿಸಲಾಯಿತು.

ವಿಮರ್ಶಾತ್ಮಕ ಪೌರತ್ವ ವಿಧಾನ

ವಿಮರ್ಶಾತ್ಮಕ ಪೌರತ್ವ ವಿಧಾನವು, ನಿಮ್ಮದೇ ಆದ ಪರಿಸರದಲ್ಲಿ ಸೂಕ್ಷ್ಮ ವಿಚಾರಗಳನ್ನು ಚರ್ಚಿಸಲು ಆತ್ಮವಿಶ್ವಾಸ ಮತ್ತು ದಾರಿಯನ್ನು ಹುಡುಕಿಕೊಳ್ಳುವುದನ್ನು ಸೂಚಿಸುತ್ತದೆ. ಕೆಲವು ಉದಾಹರಣೆಗಳನ್ನು ಗಮನಿಸಿ:

ಹೆಚ್ಚಿನ ಹೊಸ ಅಧ್ಯಾಯಗಳು, ವಿದ್ಯಾರ್ಥಿಗಳು ತಮ್ಮದೇ ಆದ ಸಾಮಾಜಿಕ ಪರಿಸ್ಥಿತಿಯಲ್ಲಿ ಗಳಿಸುವ ಅಭಿಪ್ರಾಯಗಳೊಡನೆ ತೊಡಗಿಸಿಕೊಳ್ಳುವುದಕ್ಕೆ ಮಾತ್ರವಲ್ಲದೆ ಅವುಗಳನ್ನು ಮುನ್ನೆಲೆಗೆ ತರುವುದಕ್ಕೆ ಪ್ರಶಸ್ತವಾಗಿದೆ. ಆದರೆ ವಿವಿಧ ದೃಷ್ಟಿಕೋನಗಳು ಮತ್ತು ಸಂಘರ್ಷಗಳ ಜೊತೆ ತೊಡಗಿಸಿಕೊಳ್ಳುವ ಸಾಮರ್ಥ್ಯವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಇಂದೋರ್ ನಗರದ ಉನ್ನತ ವರ್ಗದ ಶಾಲೆಯೊಂದರ ಶಿಕ್ಷಕಿಯೊಬ್ಬರು ಜಾತಿ ಆಧಾರಿತ ಮೀಸಲಾತಿಯ ಕುರಿತು ಚರ್ಚಿಸಲು ಹಿಂಜರಿಯುತ್ತಿದ್ದರು. ಆದರೆ ಮಹಿಳೆಯರಿಗೆ ಮೀಸಲಾತಿ ನೀಡುವ ಕುರಿತು ಉತ್ಸಾಹದಿಂದ ಮಾತನಾಡುತ್ತಿದ್ದರು. ಅಧ್ಯಾಯವೊಂದರಲ್ಲಿ ಇದ್ದ ಪ್ರಶ್ನೆಯಿಂದ ಪ್ರೇರಣೆ ಪಡೆದು, ಅವರು ಅನುಭವಿಸಿದ್ದ ಕಥೆಗಳನ್ನು ಹೇಳಲು ಪ್ರಾರಂಭಿಸಿದರು ಹಾಗು ಅನೇಕ ಮಹಿಳೆಯರಿಗೆ ಮೀಸಲಾತಿಯು ಹೇಗೆ ಯಶಸ್ಸಿನ ಮೆಟ್ಟಿಲಾಯಿತು ಎಂಬುದನ್ನು ನಿರೂಪಿಸಿದರು. ಆದರೆ ನಿರೀಕ್ಷೆಯಂತೆಯೇ, ಅವರು ಮನೆಯ ಕೆಲಸ ಮತ್ತು ಕಚೇರಿ ಕೆಲಸ ಎರಡನ್ನೂ ಮಾಡಬೇಕಾಗಿತ್ತು. ಇದನ್ನು ಕೆಲವು ಬಾಲಕರು ಪ್ರಶ್ನಿಸಿದರು. ತಕ್ಷಣವೇ ತರಗತಿಯಲ್ಲಿದ್ದ ಬಾಲಕಿಯರ ಕಡೆಯಿಂದ ಸಾಕ್ಷ್ಯಾಧಾರಗಳ ಸುರಿಮಳೆಯೇ ಹರಿಯಿತು. ತಮ್ಮದೇ ಕುಟುಂಬಗಳ ಕಥೆಯನ್ನು ಇವರು ಹೇಳಲು ಪ್ರಾರಂಭಿಸಿದರು. ಈ ಸ್ವಯಂಪ್ರೇರಿತ ಚರ್ಚೆಯನ್ನು ಕೊನೆಯ ತನಕ ಶಿಕ್ಷಕಿ ನಿರ್ದೇಶಿಸಿದ ರೀತಿಯು ಅದ್ಭುತವಾಗಿತ್ತು.

ಒಂದು ದಿನ ನನಗೆ ಓರ್ವ ಯುವ ಸ್ನೇಹಿತೆಯಿಂದ ದೂರವಾಣಿ ಕರೆ ಬಂತು. ಶಿಕ್ಷಕರ ಸಭೆಯಲ್ಲಿ ಒಬ್ಬರು ಕೇಳಿದ ಪ್ರಶ್ನೆಯಿಂದ ಈ ಶಿಕ್ಷಕಿ ದಿಗಿಲುಗೊಂಡಿದ್ದರು. 'ಹಿಂದೂ ರಾಷ್ಟ್ರವಾದರೆ ನಮಗೆ ಒಳ್ಳೆಯದು ತಾನೆ? ಇದು ಪ್ರತಿನಿತ್ಯದ ಹೋರಾಟವನ್ನು ಕೊನೆಗೊಳಿಸುತ್ತದೆ' ಎಂದು ಅವರು ನೇರವಾಗಿ ಆಕೆಯನ್ನು ಕೇಳಿಬಿಟ್ಟಿದ್ದರು. ಆ ಶಿಕ್ಷಕಿಯ ಮೊದಲ ಪ್ರತಿಕ್ರಿಯೆಯು, 'ಅವರು ಇದನ್ನು ಹೇಗೆ ಕೇಳುತ್ತಾರೆ?' ಇದು ನಮ್ಮ ಸಂವಿಧಾನಕ್ಕೆ ವಿರುದ್ಧವಾಗಿದೆ.' ಆದರೆ ಆ ಪ್ರಶ್ನೆಯು ಸಂವಿಧಾನಕ್ಕಿಂತಲೂ ನಾವು ಯಾವ ರೀತಿಯ ಸಮಾಜವನ್ನು ರೂಪಿಸುತ್ತೇವೆ ಎಂಬುದಕ್ಕೆ ಸಂಬಂಧಿಸಿತ್ತು ಎಂಬ ವಿಚಾರವನ್ನು ಅರಿತುಕೊಳ್ಳಲು ಆಕೆಗೆ ಸಾಕಷ್ಟು ಸಮಯ ಬೇಕಾಯಿತು. ನಾವಿಂದು ಮತ ಧಾರ್ಮಿಕ ನಿಲುವನ್ನು ಏಕೆ ತಿರಸ್ಕರಿಸಬೇಕು? ನಮ್ಮ ಸಂವಿಧಾನವು ಜೀವಂತ ದಾಖಲೆಯಾಗಿದ್ದು, ಇದನ್ನು

ಎಚ್ಚರಿಕೆಯಿಂದ ಓದಿದರೆ ಇದರ ಮೌಲ್ಯಗಳಲ್ಲಿ ನಾವು ಹೊಂದಿರುವ ನಂಬಿಕೆಯನ್ನು ಮತ್ತೆ ದೃಢೀಕರಿಸಲು ನೆರವಾಗುತ್ತದೆ. ವಕೀಲರು ಮತ್ತು ನ್ಯಾಯಾಲಯಗಳು ಮಾತ್ರವಲ್ಲದೆ ಬೇರೆ ಎಲ್ಲಾ ರೀತಿಯ ಸಂವಾದಗಳಲ್ಲಿ ಇದನ್ನು ಕಾರ್ಯರೂಪಕ್ಕೆ ತರಬೇಕು.

ಇದೇ ರೀತಿ, ಓಂಪ್ರಕಾಶ್ ವಾಲ್ಮೀಕಿಯವರ 'ಝೂಠನ್' ಆತ್ಮಚರಿತ್ರೆಯ ಸಾಲುಗಳನ್ನು ಚರ್ಚಿಸುತ್ತಿದ್ದಾಗ ಶಿಕ್ಷಕಿಯೊಬ್ಬರು, ತನ್ನ ತರಗತಿಯಲ್ಲಿ ಎದುರಿಸಿದ ಸೂಕ್ಷ್ಮ ಸಂದರ್ಭವೊಂದನ್ನು ವಿವರಿಸಿದರು. ಇದು ಆರನೇ ತರಗತಿಗೆ ಇದ್ದ ಎನ್.ಸಿ.ಇ.ಆರ್.ಟಿಯ ಸಾಮಾಜಿಕ ಮತ್ತು ರಾಜಕೀಯ ಜೀವನ ಪಠ್ಯಪುಸ್ತಕದ ಭಾಗವಾಗಿತ್ತು. ಕೆಲವು ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿಗಳನ್ನು ಗುರಿಯಾಗಿಸಿದರು. ವಾಲ್ಮೀಕಿಯವರು ತನ್ನ ಶಾಲೆಯಲ್ಲಿ ಎದುರಿಸಿದ್ದ ಅನುಭವವನ್ನು ನಕಲು ಮಾಡಿ, 'ಕಸ ಗುಡಿಸು' ಎಂದು ಅವರನ್ನು ಅಣಕಿಸಿದರು. ಶಿಕ್ಷಕಿಯು ದಿಗಿಲುಗೊಂಡರು ಹಾಗು ಅವರ ವರ್ತನೆಯಿಂದ ಇಡೀ ಸಂವಾದವೇ ಹಳಿ ತಪ್ಪಿತು. ನಂತರ ಅವರು, ತನ್ನ ಹಿನ್ನೆಲೆಯನ್ನೇ ಮುಂದಿಟ್ಟು, ಚಾಲ್ತಿಯಲ್ಲಿದ್ದ ಜಾತಿ ಪದ್ಧತಿಯನ್ನು ಚರ್ಚಿಸಲು ಸಾಕಷ್ಟು ಸಮಯವನ್ನು ಮೀಸಲಿಟ್ಟರು. ತನ್ನದೇ ಆದ ಅನುಭವಗಳ ಮೂಲಕ ಹಾಗು 'ಕೆಲವರಿಗೆ ಮನೆಯಲ್ಲಿ ಪ್ರತ್ಯೇಕ ಲೋಟಗಳನ್ನು ಇಡಲಾಗಿದೆಯೇ? ಕೆಲವರಿಗೆ ಅಂಗಳದ ತನಕ ಮಾತ್ರವೇ ಪ್ರವೇಶವಿದೆಯೇ?' ಮುಂತಾದ ಪ್ರಶ್ನೆಗಳನ್ನು ಕೇಳುವ ಮೂಲಕ ಚರ್ಚೆಯನ್ನು ಮುಂದುವರಿಸಿದರು. ಅವರು ಒಂದು ದೀರ್ಘ ಪಟ್ಟಿಯನ್ನು ತಯಾರು ಮಾಡಿದರು ಮತ್ತು ಎಲ್ಲರಿಗೂ ಸಮಾನ ಗೌರವ ಎನ್ನುವ ಪರಿಕಲ್ಪನೆಯನ್ನು ಅವು ಹೇಗೆ ಉಲ್ಲಂಘಿಸುತ್ತವೆ ಎಂಬುದನ್ನು ಚರ್ಚಿಸಿದರು. ವಿದ್ಯಾರ್ಥಿಗಳ ನಡುವೆ ಯಾವುದೇ ವೈಯಕ್ತಿಕ ದ್ವೇಷವನ್ನು ಹುಟ್ಟು ಹಾಕದೆ ಇದನ್ನೆಲ್ಲ ಮಾಡುವುದು ಆಕೆಗೆ ಸಾಧ್ಯವಾಯಿತು.

ನಮ್ಮ ನಂಬಿಕೆಯಾಗಿ ಪರಿಗಣಿಸುವ (ನಿಷ್ಕ್ರಿಯ ಅಥವಾ ಸಕ್ರಿಯ) ಪೌರತ್ವದ ಗುಣಸ್ವಭಾವವು ಸದ್ಯದ ಭವಿಷ್ಯದಲ್ಲಿ ಪ್ರಮುಖ ಪಾತ್ರವಹಿಸಲಿದೆ. ಸಮಕಾಲೀನ ಈ ಸಂದರ್ಭದಲ್ಲಿ, ಸಿ.ಎ.ಎ ಅಥವಾ 'ಲವ್-ಜಿಹಾದ್'ನಂತಹ ವಿಚಾರಗಳ ಮೂಲಕ ಪ್ರಸ್ತುತ ಶಾಸನಗಳು ಸಮಾಜದಲ್ಲಿ ಒಡಕನ್ನು ಹೆಚ್ಚಿಸುತ್ತಿರುವ ಸಂದರ್ಭದಲ್ಲಿ, ಸರ್ಕಾರವು ನಿಷ್ಕ್ರಿಯ ಪೌರತ್ವ ನಂಬಿಕೆಯತ್ತ ವಾಲುವುದನ್ನು ನಾವು ನೋಡಬಹುದು. ಕರ್ತವ್ಯಗಳು, ಶಿಸ್ತು, ಪ್ರಾಮಾಣಿಕತೆಯ ಮೇಲೆ ಹೆಚ್ಚು ಒತ್ತು ನೀಡಲಾಗುತ್ತದೆ. ಆದರೆ ಮಾನವ ಹಕ್ಕುಗಳು, ಸಾಮಾಜಿಕ ಕಲ್ಯಾಣ, ಸಮಾಜದಲ್ಲಿ ಉಂಟಾಗುವ ತುಳಿತ ಮತ್ತು ಶೋಷಣೆ ಮುಂತಾದವುಗಳನ್ನು ಸಂದೇಹದಿಂದ ನೋಡಲಾಗುತ್ತದೆ. ಒಟ್ಟಾರೆ, ಪಠ್ಯಕ್ರಮ ಸುಧಾರಣೆಗೆ ಮುಕ್ತ ಅವಕಾಶ ಸಿಗುವುದು ತೀರಾ ಕಡಿಮೆ.

ಆದರೂ, ಈ ನಿರಾಶಾದಾಯಕ ಸನ್ನಿವೇಶದಲ್ಲಿಯೂ, ಸ್ವಾಗತಾರ್ಹ ಪಠ್ಯಕ್ರಮ ಮಧ್ಯಪ್ರವೇಶಕ್ಕೆ ನಾವು ಅನಿರೀಕ್ಷಿತ ಅವಕಾಶಗಳನ್ನು ಪಡೆಯಲೂಬಹುದು. ಇದೆಲ್ಲದರ ನಡುವೆ ನಾವು ವಿಮರ್ಶಾತ್ಮಕ ಪೌರತ್ವದ ಬಗೆಗಿನ ನಮ್ಮ ನಂಬಿಕೆಯನ್ನು ಎತ್ತಿ ಹಿಡಿಯಬೇಕಾದರೆ, ಇನ್ನೂ ಹೆಚ್ಚಿನ ಸೃಜನಾತ್ಮಕ ಮತ್ತು ಹುರುಪಿನ ವಿಧಾನದಲ್ಲಿ ಪಠ್ಯೇತರ ಅವಕಾಶಗಳತ್ತ ಸಾಗಬೇಕಿದೆ. ಹೀಗಾಗಿ, ಶಿಕ್ಷಕರ ಕ್ರಮಗಳಿಂದ ನಾವೇನು ಕಲಿಯಬಹುದು ಎಂಬುದನ್ನು ಈ ಕೆಳಗೆ ಚರ್ಚಿಸಲಾಗಿದೆ.

ಕ್ರಿಯೆಗಳು ಶಬ್ದಗಳಿಗಿಂತಲೂ ಜೋರಾಗಿ ಮಾತನಾಡುತ್ತವೆ

ಇದು, ಈ ಹಿನ್ನೆಲೆಯಲ್ಲಿ ಅವರದೇ ಸನ್ನಿವೇಶದಲ್ಲಿ ಶಿಕ್ಷಕರ ಉಪಕ್ರಮಗಳನ್ನು ಗುರುತಿಸಿ ಮತ್ತು ಉತ್ತೇಜಿಸುವ ಅಗತ್ಯವಿದೆ. ಭಾರತದಲ್ಲಿ, ಜಾತಿ ಅಸಮಾನತೆ ಮತ್ತು ಸಾಮ್ರಾಜ್ಯಶಾಹಿ ಹಾಗು ಸರ್ವಾಧಿಕಾರಿ ಆಡಳಿತದ ನೆಲೆಗಟ್ಟಿನಲ್ಲಿ ರೂಪುಗೊಂಡ ಸಮಾಜದ ಮನೋಧರ್ಮದ ವಿರುದ್ಧವಾಗಿ ಪ್ರಜಾತಾಂತ್ರಿಕ ವ್ಯವಸ್ಥೆಯನ್ನೂ ಜಾರಿಗೆ ತರಲಾಯಿತು. ಸ್ವಾತಂತ್ರ್ಯಾ ನಂತರದ ಆರಂಭಿಕ ಪರಿಸ್ಥಿತಿಯು ಅಸಂಭವನೀಯವಾಗಿದ್ದಲ್ಲದೆ, ಸಾಂಪ್ರದಾಯಿಕ ರಾಜಕೀಯ ಸಿದ್ಧಾಂತಗಳು 'ಸಮಾನವಾಗಿ ಅನುಕೂಲಕರವಲ್ಲದ (ಬಡವರು, ಅನಕ್ಷರಸ್ಥರು ಮತ್ತು ಆಶ್ಚರ್ಯಕರವಾಗಿ ವೈವಿಧ್ಯಮಯ ಪೌರ ಸಮುದಾಯದ ನಡುವೆ) ಸ್ಥಿತಿ' ಎಂದು ಕರೆಯುವ ಸನ್ನಿವೇಶದಲ್ಲಿ ಪ್ರಜಾಸತ್ತೆಯು ಉಳಿದುಕೊಳ್ಳಬೇಕಿರುತ್ತದೆ. ಇದು ಉಳಿದುಕೊಂಡಿರುವುದು ಮಾತ್ರವಲ್ಲದೆ ಭಾರತೀಯ ಸಮಾಜವನ್ನು ಅನಿರೀಕ್ಷಿತ ರೀತಿಯಲ್ಲಿ ಪುನಶ್ಚೇತನಗೊಳಿಸುವಲ್ಲಿ ಇದು ಯಶಸ್ವಿಯಾಯಿತು. ಆರಂಭದಲ್ಲಿ, ಕಾನೂನುಬದ್ಧ ರಾಷ್ಟ್ರೀಯವಾದಿ ಗಣ್ಯರು (legalistic nationalist elite) ಸರ್ಕಾರದ ರೂಪದಲ್ಲಿ ನಾಜೂಕಾಗಿ ಪರಿಚಯಿಸಿದ ಪ್ರಜಾತಾಂತ್ರಿಕತೆಯು ಸಮಾಜದ ಸಿದ್ಧಾಂತವಾಗಿ ವಿಸ್ತರಣೆಗೊಂಡು ಗಾಢವಾಗಿ ಬೇರುಬಿಟ್ಟಿದ್ದು, ಭಾರತೀಯರಿಗೆ ಲಭ್ಯವಾಗುವ ಸಾಧ್ಯತೆಗಳನ್ನು ರೂಪಾಂತರಿಸಿದೆ. **'ಅವರು ಪಠ್ಯಪುಸ್ತಕಗಳಿಂದ ಕಲಿಯದೆಯೇ, ಸಮಗ್ರ ಅಭ್ಯಾಸದಿಂದ ಇದನ್ನು ಆಲಿಂಗಿಸಿ-ಕೊಂಡಿದ್ದಾರೆ. ಆದರೂ ಭಾರತೀಯ ಪ್ರಜಾತಾಂತ್ರಿಕತೆಯ ಅಭೂತಪೂರ್ವ ಯಶಸ್ಸು ಇದರ ಮುಂದುವರಿದ ಸಾಂಸ್ಥಿಕ ಉಳಿವಿಗೂ ಸವಾಲೊಡ್ಡುತ್ತಿದೆ.'** (ದಿ ಐಡಿಯಾ ಆಫ್ ಇಂಡಿಯಾ, ಸುನಿಲ್ ಖಿಲ್ನಾನಿ) 'ಪೌರತ್ವ ಶಿಕ್ಷಣವು ಒಂದು ಜೀವಂತ ಉದಾಹರಣೆ-ಯಾಗಬೇಕು ಮತ್ತು ತನ್ನದೇ ಆದ ಸನ್ನಿವೇಶದಲ್ಲಿ ಪ್ರಜಾ-ತಾಂತ್ರಿಕತೆಯ ಜೊತೆಗಿನ ತೊಡಗಿಸಿಕೊಳ್ಳುವಿಕೆ ಎನಿಸಿ-ಕೊಳ್ಳಬೇಕು.' ಸುನಿಲ್ ಖಿಲ್ನಾನಿ ಅವರು ತನ್ನ ಪುಸ್ತಕದಲ್ಲಿ ಹೇಳಿರುವುದನ್ನು ಇದು ಅನುಮೋದಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಇದರ ಉಳಿವಿನ ಕುರಿತು ಸವಾಲು ಎದುರಾಗಿದೆ. ಭವಿಷ್ಯಕ್ಕೆ ಯಾವುದು ಕಾರ್ಯಸಿಂಧು ಆಗಬಹುದು ಎಂದು ನಾನು ಚರ್ಚಿಸುವ ಮೊದಲು, ಶಿಕ್ಷಕರು ಹೇಗೆ ಅನೇಕ ಚಿಂತನಶೀಲ ಮತ್ತು ಸೃಜನಾತ್ಮಕ ವಿಧಾನಗಳಲ್ಲಿ ಪ್ರಜಾತಾಂತ್ರಿಕತೆಯನ್ನು ಮೈಗೂಡಿಸಿ-ಕೊಂಡಿದ್ದಾರೆ ಎಂಬುದನ್ನು ಈ ಕೆಳಗೆ ವಿವರಿಸುತ್ತೇನೆ. ನಮ್ಮ ಸಮಾಜದಲ್ಲಿ ಪ್ರಜಾತಾಂತ್ರಿಕತೆಯನ್ನು ಗಟ್ಟಿಗೊಳಿಸಲು ಇಂತಹ ಕ್ರಮಗಳ ಮೂಲಕ ಮಾಡಿದ ಕೊಡುಗೆಯು ಮುಖ್ಯವಾಗುತ್ತದೆ. ಶಿಕ್ಷಕರ ಜೀವಂತ ಅನುಭವಗಳನ್ನು ನಾವು ನೋಡಿದರೆ, ನಮ್ಮದೇ ಆದ ಪ್ರದೇಶಗಳಲ್ಲಿ ಇಂತಹ ಅನೇಕ ಅನುಭವಗಳನ್ನು ಕಾಣುವುದು ಖಂಡಿತ. ನಾವು ಇವುಗಳ ಪಾಲಿಗೆ ಜಾಣ ಕುರುಡು ಪ್ರದರ್ಶಿಸಿದ್ದೇವೆ ಹಾಗು ಅವುಗಳ ಮೌಲ್ಯ ಮತ್ತು ಸಾಮರ್ಥ್ಯವನ್ನು ಗುರುತಿಸಿಲ್ಲ ಅಷ್ಟೆ. ತನಗೆ ಕೆಲಸ ದೊರೆತ ಹಳ್ಳಿಯಲ್ಲೇ ಎರಡು ದಶಕಗಳ ಕಾಲ ಜೀವನ ನಡೆಸುತ್ತಿದ್ದ ಹಾಗು ಸಮಾಜ ವಿಜ್ಞಾನ ಗುಂಪಿನ ಭಾಗವೆನಿಸಿದ್ದ ಒಬ್ಬ ದಲಿತ ಶಿಕ್ಷಕರ ಪರಿಚಯ ನನಗಿದೆ. ಅವರಿಗೆ ದಲಿತ ವಿಚಾರಗಳ ಕುರಿತು ಗಾಢವಾದ ಆಸಕ್ತಿ ಇತ್ತು. ಆದರೆ ತರಗತಿ ಕೊಠಡಿಯಲ್ಲಾಗಲೀ ಅಥವಾ ನಮ್ಮೊಂದಿಗಾಗಲೀ ಅವರು ಈ ಕುರಿತು ಚರ್ಚಿಸುತ್ತಿರಲಿಲ್ಲ. ದಲಿತ ಮಕ್ಕಳ ಶಿಕ್ಷಣವನ್ನು ಬೆಂಬಲಿಸುವುದಕ್ಕಾಗಿ ಅವರು ಸಾಂಕೇತಿಕ ವಿಧಾನಗಳು ಮತ್ತು ನಾಜೂಕಿನ ದಾರಿಗಳನ್ನು ಬಳಸಿಕೊಳ್ಳುತ್ತಿದ್ದರು ಎಂಬುದು ನನಗೆ ಸಾಕಷ್ಟು ಸಮಯದ ನಂತರ ತಿಳಿದುಬಂದಿತು. ಒಂದು ಘಟನೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತುಬಿಟ್ಟಿದೆ. ಪೋಷಕರೊಬ್ಬರು ಅವರ ಮಗುವಿನ ವರ್ಗಾವಣೆ ಪತ್ರಕ್ಕಾಗಿ ಈ ಶಿಕ್ಷಕರನ್ನು ಸಂಪರ್ಕಿಸಿದರು.

ಆದರೆ ಅವರು ಶಾಲೆಯ ಕಟ್ಟಡದೊಳಗೆ ಪ್ರವೇಶಿಸಿರಲಿಲ್ಲ. ಬದಲಾಗಿ ಅಂಗಳದಿಂದಲೇ ಮಾತನಾಡಲು ಇಷ್ಟಪಟ್ಟರು. ಶಿಕ್ಷಕರು ಇದನ್ನು ಅರ್ಥಮಾಡಿಕೊಂಡರು ಹಾಗು ತರಗತಿ ಕೊಠಡಿಯಿಂದ ಅವರು ಹೊರಬಂದರು. ಅವರನ್ನು ಒಳಬರುವಂತೆ ಮಾಡಿ, ಆ ತಂದೆಗೆ ಇರಿಸುಮುರುಸು ಆದರೂ, ಅವರನ್ನು ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಮಾಡಿದರು. ವರ್ಗಾವಣೆ ಪತ್ರಕ್ಕಾಗಿ ಕಡತಗಳಲ್ಲಿ ಹುಡುಕುತ್ತಿರುವಾಗಲೇ ಅವರ ಜೊತೆ ಅನೌಪಚಾರಿಕ ಚರ್ಚೆಯನ್ನು ಮುಂದುವರಿಸಿದರು. ಇದೇ ವೇಳೆ, ಇಡೀ ತರಗತಿಯು ಈ ಘಟನೆಯನ್ನು ವೀಕ್ಷಿಸಿತು ಹಾಗು ಇದರ ಅರ್ಥವನ್ನು ಗ್ರಹಿಸಿಕೊಂಡಿತು.

ಇಚಿತಹ ಅನೇಕ ವಿಧಾನಗಳನ್ನು ಅವರು ಅನುಸರಿಸುತ್ತಿದ್ದರು. ಅವರು ಅತ್ಯಂತ ಬಡಕುಟುಂಬದ ಒಬ್ಬ ಹೆಣ್ಣುಮಗಳು ಶಿಕ್ಷಣ ಮತ್ತು ವಸತಿನಿಲಯದ ಶುಲ್ಕವನ್ನು ಭರಿಸಿದರು ಮತ್ತು ಅತ್ಯಂತ ಸವಾಲಿನ ಪರಿಸ್ಥಿತಿಯ ನಡುವೆ ಆಕೆ ವ್ಯಾಸಂಗ ಮುಗಿಸಿ ಶಿಕ್ಷಕಿಯಾದಳು. ಬೆಳೆಯುತ್ತಿದ್ದ ಸಾರಿಗೆ ಕ್ಷೇತ್ರದಲ್ಲಿ ಕೆಲಸ ಪಡೆಯುವಂತಾಗಲು, ಬಡ ಕುಟುಂಬಗಳಿಂದ ಬಂದ ಅನೇಕ ಹುಡುಗರು ಎಂಟನೇ ತರಗತಿಯ ಪರೀಕ್ಷೆಯನ್ನು ಬರೆಯುವಂತೆ ಅವರು ಉತ್ತೇಜಿಸಿದರು. ಶಾಲೆಯಲ್ಲಿ ತನ್ನ ಸಹೋದ್ಯೋಗಿಗಳು ನೀಡಿದ ಮೌನ ಬೆಂಬಲದ (tacit support) ಕಾರಣ ಇದೆಲ್ಲ ಸಾಧ್ಯವಾಯಿತು ಎಂದು ಅವರು ಹಲವಾರು ವರ್ಷಗಳ ನಂತರ ಅವರು ವಿವರಿಸಿದರು. ಆ ಮೌನ–ಸಹೋದ್ಯೋಗಿ ವರ್ಗವು ಸಾರ್ವಜನಿಕ ಚರ್ಚೆಯನ್ನು ನಡೆಸದೆ ಪ್ರಚಾರದಿಂದ ದೂರ ಉಳಿಯಿತು. ಆದರೆ ಇವುಗಳ ಪರಿಣಾಮ ಮಾತ್ರ ಗಣನೀಯವಾಗಿತ್ತು.

ಸಮೀಪದ ಹಳ್ಳಿಯ ಇನ್ನೊಬ್ಬ ದಲಿತ ಶಿಕ್ಷಕರೊಬ್ಬರು ಆ ಹಳ್ಳಿಯ ವಿದ್ಯಾರ್ಥಿಗಳಿಗಾಗಿ ಟ್ಯೂಷನ್ ಕೇಂದ್ರವನ್ನು ಸ್ಥಾಪಿಸಿದರು. ಸರ್ಕಾರಿ ಪ್ರಾಯೋಜಕತ್ವದ ಶಿಕ್ಷಣ ಮತ್ತು ಆರೈಕೆಯನ್ನು ಒದಗಿಸುವ ಜವಾಹರ್ ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಯನ್ನು ಬರೆಯಲು ಹಳ್ಳಿಯ ಮಕ್ಕಳು ಸಾಮರ್ಥ್ಯ ಗಳಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಇವರು ಈ ಟ್ಯೂಷನ್ ಕೇಂದ್ರವನ್ನು ತೆರೆದಿದ್ದರು. ಗ್ರಾಮೀಣ ಸಮಾಜದ ಎಲ್ಲಾ ಜಾತಿ ವರ್ಗಗಳು ಹಾಜರಾಗುವ ಕೋಚಿಂಗ್ ತರಗತಿಯನ್ನು ದಲಿತ ಶಿಕ್ಷಕರೊಬ್ಬರು ನಡೆಸುವುದು ಕಷ್ಟಕರವಾದರೂ, ತನ್ನ ಕೆಲಸದಲ್ಲಿ ಇವರು ಯಶಸ್ವಿಯಾದರು. ಇಂತಹ ಅನುಭವಗಳಿಂದಲೇ, (ಗ್ರಾಮೀಣ ಪರಿಸರದಲ್ಲಿ ಇದು ಅಸಾಧ್ಯ ಎನಿಸಿದರೂ) ಶಾಲಾ ಪರಿಸರದಲ್ಲಿ ಎಲ್ಲರೂ ಸಮಾನ ಎನ್ನುವ ಕಲ್ಪನೆಯನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳುತ್ತಾರೆ.

ತಮ್ಮ ಮಾಧ್ಯಮಿಕ ಶಾಲೆಯೊಂದರದಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸುವುದಕ್ಕಾಗಿ, ಆ ಶಾಲೆಯ ಶಿಕ್ಷಕರ ತಂಡವೊಂದು ಸರಳ ಸೂತ್ರವನ್ನು ರೂಪಿಸಿತು. ಸರ್ಕಾರದ ಆಪರೇಶನ್ ಬ್ಲ್ಯಾಕ್–ಬೋರ್ಡ್ ಯೋಜನೆಯಡಿ (1986) ಮಹಿಳೆಯರನ್ನು ಪ್ರಾಥಮಿಕ ಶಾಲಾ ಶಿಕ್ಷಕಿಯರನ್ನಾಗಿ ನೇಮಿಸಲಾಯಿತು. ಇದು ಧನಾತ್ಮಕ ಫಲಿತಾಂಶಗಳನ್ನು ತಂದಿತು. ಹೆಚ್ಚಿನ ಬಾಲಕಿಯರು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿ ಮಾಧ್ಯಮಿಕ ಶಾಲೆಗೆ (ಕುಟುಂಬದ ಒತ್ತಡ ಮತ್ತು ಭದ್ರತೆಗೆ ಬಗ್ಗೆ ಸಂಬಂಧಿಸಿದ ವಿಚಾರಗಳು ಒತ್ತಡ ಹಾಕುವ ಕಾಲಘಟ್ಟವಿದು) ಸೇರಿಕೊಂಡರು. ಸ್ಥಳೀಯ ಸಮುದಾಯದಲ್ಲಿ ಭದ್ರವಾಗಿ ಬೇರೂರಿದ್ದ ಶಿಕ್ಷಕರ ಈ ತಂಡವು, ಪೋಷಕರಿಗೆ ಹೆಣ್ಣು ಮಕ್ಕಳ ಭದ್ರತೆಯ ಭರವಸೆಯನ್ನು ನೀಡಿತು ಹಾಗು ಅವರು ಮಾಧ್ಯಮಿಕ ಶಾಲೆಗೆ ಹಾಜರಾಗಲು ಅನುವು ಮಾಡಿಕೊಡುವಂತೆ ಅವರನ್ನು ವಿನಂತಿಸಿತು. ಆ ಶಾಲೆಯು ಹಳ್ಳಿಯ ಹೊರವಲಯದಲ್ಲಿ ಇದ್ದುದರಿಂದ, ಪ್ರಮುಖ ಕ್ರಮವಾಗಿ ಹುಡುಗಿಯರಿಗೆ ಮೊದಲಿಗೆ ಮನೆಗೆ ಹೋಗಲು ಅವಕಾಶ ಮಾಡಿಕೊಟ್ಟು ಗುಂಪಿನಲ್ಲಿಯೇ ಅವರು ಹಳ್ಳಿಯ ಮುಖ್ಯ ಪ್ರದೇಶಕ್ಕೆ ತಲುಪಲು ಹತ್ತು ನಿಮಿಷಗಳ ಕಾಲಾವಧಿಯನ್ನು ನೀಡಲಾಯಿತು. ನಿಯಮಗಳ ಈ ಸರಳ ಹೊಂದಾಣಿಕೆಯು ಪೋಷಕರಲ್ಲಿ ಇನ್ನಷ್ಟು ಆತ್ಮವಿಶ್ವಾಸವನ್ನು ತುಂಬಿತು ಹಾಗು ದೊಡ್ಡ ಸಂಖ್ಯೆಯಲ್ಲಿ ಬಾಲಕಿಯರು ಶಾಲೆಗೆ ದಾಖಲಾದರು.

ಇನ್ನೊಂದು ದೃಷ್ಟಾಂತದಲ್ಲಿ, ಹುಡುಗಿಯರ ಪ್ರೌಢಶಾಲೆಯೊಂದರ ಪ್ರಾಂಶುಪಾಲರು ಮತ್ತು ಸಮಾಜ ವಿಜ್ಞಾನ ಶಿಕ್ಷಕರು ಶಾಲಾ ಆವರಣದ ಗೋಡೆಯನ್ನು ಕಟ್ಟುವ ಮೂಲಕ ಪರಿವರ್ತನೆಗೆ ಅಡಿಗಲ್ಲು ಹಾಕಿದರು ಹಾಗು ಪುಸ್ತಕಗಳು, ವಿದ್ಯಾರ್ಥಿವೇತನ ಮತ್ತು ಸಮವಸ್ತ್ರಗಳ ಸೂಕ್ತ ವಿತರಣೆಯ ಮೂಲಕ ಇದನ್ನು ಮುಂದುವರಿಸಿದರು. ತರಗತಿಗಳು ವೇಳಾಪಟ್ಟಿಯಂತೆಯೇ ನಡೆಯುವಂತೆ ಖಾತ್ರಿಪಡಿಸಿದರು. ಒಂದು ವರ್ಷದೊಳಗೆ ಈ ಶಾಲೆಯ ದಾಖಲಾತಿಯು ೮೦ರಿಂದ ೪೦೦ಕ್ಕೆ ತಲುಪಿತು. ಅನೇಕ ಹುಡುಗಿಯರು ಸಣ್ಣ ಖಾಸಗಿ ಶಾಲೆಗಳನ್ನು ಬಿಟ್ಟು ಈ ಸರ್ಕಾರಿ ಶಾಲೆಗೆ ಬರಲು ಪ್ರಾರಂಭಿಸಿದರು.

ಹಳ್ಳಿಯೊಂದರ ಮಾಧ್ಯಮಿಕ ಶಾಲೆಯ ಶಿಕ್ಷಕರೊಬ್ಬರು ಅರ್ಧ ಗಂಟೆ ಬೇಗನೆ ಬಂದು ಸಣ್ಣ ಕಪ್ಪುಹಲಗೆಯಲ್ಲಿ ದಿನದ ಮುಖ್ಯ ಸುದ್ದಿಗಳನ್ನು ಬರೆಯುತ್ತಿದ್ದರು. ಇದು ಚಿಕ್ಕ ವಾಕ್ಯಗಳಾಗಿದ್ದರೂ ಕೂಡ ಅನೇಕ ವಿಷಯಗಳನ್ನು ಒಳಗೊಳ್ಳುತ್ತಿತ್ತು. ಅವರು ತುಂಬಾ ಜಾಣ್ಮೆಯಿಂದ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸುದ್ದಿಗಳನ್ನು ಆರಿಸುತ್ತಿದ್ದರು. ಮಕ್ಕಳು ಇದನ್ನು ಓದುತ್ತಿದ್ದರು ಹಾಗು ಬಿಡುವಿನ ವೇಳೆಯಲ್ಲಿ ಇದನ್ನು ತಮ್ಮ ನೋಟ್ ಪುಸ್ತಕಗಳಲ್ಲಿ ಬರೆದುಕೊಳ್ಳುತ್ತಿದ್ದರು. ಟಿ.ವಿ ಪ್ರಭಾವವು ಆಗ ತಾನೇ ಹೆಚ್ಚುತ್ತಿದ್ದ ಕಾಲವದು. ಆದರೆ ಇಡೀ ಹಳ್ಳಿಯಲ್ಲಿ ಕೆಲವು ಸುದ್ದಿಪತ್ರಿಕೆಗಳನ್ನು ವಿತರಿಸಲಾಗುತ್ತಿತ್ತು. ಮಕ್ಕಳ ಪ್ರಯಾಣದ ಅನುಭವವು ಪಕ್ಕದ ಹಳ್ಳಿಗಳಿಗಷ್ಟೇ ಸೀಮಿತವಾಗಿತ್ತು. ಪಕ್ಕದ ಪೇಟೆಗಳಾದ ಉಜ್ಜಯಿನಿ ಅಥವಾ ದೇವಾಸ್‌ಗೆ ಸಹ ಅವರು ಭೇಟಿ ನೀಡಿದ್ದು ತುಂಬಾ ವಿರಳವಾಗಿತ್ತು. ಕಾಲ ಕಳೆದಂತೆ ಈ ವಿಧಾನವು ಫಲ ನೀಡಲು ಪ್ರಾರಂಭಿಸಿತು. ಮಕ್ಕಳು ತರಗತಿಯಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದರು. ಕೆಲವೊಮ್ಮೆ ಈ ಪ್ರಶ್ನೆಗಳು ಸುದ್ದಿಯಲ್ಲಿ ಉಲ್ಲೇಖಿಸಿದ ಸ್ಥಳಗಳಿಗೆ ಸಂಬಂಧಿಸಿದರೆ, ಇನ್ನು ಕೆಲವೊಮ್ಮೆ ಯಾಕೆ ಭೂಕಂಪ ಉಂಟಾಗುತ್ತದೆ ಅಥವಾ ಯುದ್ಧವು ಏಕೆ ನಡೆದಿದೆ ಮುಂತಾದ ಪ್ರಶ್ನೆಗಳು ಇರುತ್ತಿದ್ದವು. ಅವರ ನಡುವೆ ಹಾಗು ಮನೆಯಲ್ಲಿ ಸುದ್ದಿಯ ಕೆಲವೊಂದು ತುಣುಕುಗಳು ಚರ್ಚೆಯಾಗುತ್ತಿದ್ದವು. ಅವರು ಸಾಕಷ್ಟು ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು ಮತ್ತು ಆ ದಿನದ ಸುದ್ದಿಗಾಗಿ ಎದುರು ನೋಡುತ್ತಿದ್ದರು. ಇದು ಇಡೀ ಪ್ರಪಂಚವನ್ನು ನೋಡಲು ಅವರ ಪಾಲಿಗಿದ್ದ ಕಿಟಕಿಯಾಗಿತ್ತು.

ಏಕಲವ್ಯದ ಹದಿಹರೆಯದ ಆರೋಗ್ಯ ಕಾರ್ಯಕ್ರಮದ (Adolescence Health Programme) ಜೊತೆ ಕೈಜೋಡಿಸಿದ್ದ ಸರ್ಕಾರಿ ಶಾಲೆಗಳ ಶಿಕ್ಷಕಿಯರು, ಅನೇಕ ಸೂಕ್ಷ್ಮ ವಿಚಾರಗಳನ್ನು ಬಾಲಕಿಯರ ಜೊತೆ ಮುಕ್ತವಾಗಿ ಚರ್ಚಿಸಬೇಕು ಎಂಬ ಸ್ಪಷ್ಟ ಅಭಿಪ್ರಾಯವನ್ನು ಹೊಂದಿದ್ದರು. ಈ ವ್ಯಾಪ್ತಿಯಲ್ಲಿ ಒಳಗೊಂಡಿದ್ದ ಕೆಲವು ವಿಷಯಗಳೆಂದರೆ ಲಿಂಗ, ಕೌಟುಂಬಿಕ ಹಿಂಸೆ, ಮುಟ್ಟಾಗುವಿಕೆ, ಗರ್ಭನಿರೋಧಕ ವಿಧಾನಗಳು ಇತ್ಯಾದಿ. ವಿಪರೀತ ಪಿತೃಪ್ರಧಾನ ಸಮಾಜದಲ್ಲಿ ಇಂತಹ ವಿಷಯಗಳನ್ನು ಚರ್ಚಿಸುವುದು

ಸುಲಭದ ಮಾತಾಗಿರಲಿಲ್ಲ. ಆದರೆ ಈ ಮಹಿಳೆಯರು ಅಚ್ಚರಿ ಎಂಬಂತೆ ನಿರ್ಭೀತಿಯಿಂದ ವರ್ತಿಸಿಸಿದರು ಮತ್ತು ಈ ಕಾರ್ಯಾಗಾರಗಳನ್ನು ನಡೆಸಲು ಪರಸ್ಪರ ಬೆಂಬಲ ನೀಡಿದರು. ಅವರು ತಮ್ಮದೇ ಆದ ದೀರ್ಘ ಹೋರಾಟವನ್ನು ನಡೆಸಿದ ಕಾರಣದಿಂದಲೇ ಇಂಥ ವಿಚಾರಗಳಲ್ಲಿ ಇದರ ಉದ್ದೇಶ ಮತ್ತು ಅವಕಾಶವನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವ ಆಸಕ್ತಿ ಅವರಲ್ಲಿ ಹುಟ್ಟಿಕೊಂಡಿತು. ಅವರಲ್ಲಿ ಯಾರಿಗೂ ಶಿಕ್ಷಕಿಯಾಗಿ ಬೆಳೆಯುವುದು ಹಾಗು ಕುಟುಂಬ ಮತ್ತು ಶಾಲೆಯಲ್ಲಿ ಬೇರೆಬೇರೆ ಪಾತ್ರಗಳನ್ನು ನಿಭಾಯಿಸುವುದು ಸುಲಭದ ಮಾತಾಗಿರಲಿಲ್ಲ. ಈ ಮಹಿಳಾ ತಂಡದಲ್ಲಿದ್ದ ಬಾಂಧವ್ಯವು ಅದ್ಭುತವಾಗಿತ್ತು ಮತ್ತು ಸಾಕಷ್ಟು ವರ್ಷಗಳ ಕಾಲ ಜೀವಂತವಾಗಿ ಉಳಿಯಿತು.

ಶಾಲಾ ಶಿಕ್ಷಣದ ಹಿನ್ನೆಲೆಯಲ್ಲಿ ಹೇಳುವುದಾದರೆ, ಪಠ್ಯಕ್ರಮದ ಸಾಮಗ್ರಿಗಳ ಮೇಲೆ ಸಾಕಷ್ಟು ಗಮನ ಹರಿಸಲಾಗುತ್ತದೆಯಾದರೂ, ಶಿಕ್ಷಕರ ದೃಷ್ಟಿಕೋನ ಮತ್ತು ಜಗತ್ತನ್ನು ಪರಿಭಾವಿಸುವ ರೀತಿಗಳ ಕುರಿತು ಅವರೊಂದಿಗೆ ಯಾವ ಸಂವಾದವೂ ನಡೆಯುವುದಿಲ್ಲ. ಪ್ರಜಾಪ್ರಭುತ್ವದ ಜೀವಂತ ಸನ್ನಿವೇಶದಲ್ಲಿ, ಶಿಕ್ಷಕರ ಅನೇಕ ಅನುಭವಗಳು, ಅರ್ಥಪೂರ್ಣ ತೊಡಗಿಸಿಕೊಳ್ಳುವಿಕೆಯ ಅನೇಕ ವಿಧಾನಗಳನ್ನು ನಮಗೆ ತೋರಿಸುತ್ತವೆ. ಸಾಂವಿಧಾನಿಕ ಮೌಲ್ಯಗಳ ಜೊತೆ ತೊಡಗಿಸಿಕೊಳ್ಳಲು ಅವರು ಬಳಸಿಕೊಂಡ ಸೂಕ್ಷ್ಮ ವಿಧಾನಗಳು, ಅವರ ಸ್ವಾಯತ್ತತೆಯನ್ನು ಬಲಪಡಿಸಿದರೆ ಸೃಜನಾತ್ಮಕ ದಾರಿಗಳು ತೆರೆದುಕೊಳ್ಳುತ್ತವೆ ಎಂಬುದನ್ನು ತೋರಿಸಿಕೊಡುತ್ತವೆ. ಸ್ವಾಯತ್ತತೆಯ ಸಂಸ್ಕೃತಿಯು ಶಿಕ್ಷಕರು ಮತ್ತು ಶಾಲಾ ತಂಡ ಒದಗಿಸುವ ಬದಲಾವಣೆಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ವಿಷಯಾಧಾರಿತ ಕಾರ್ಯಾಗಾರಗಳನ್ನು ನಡೆಸುವುದು, ಶಿಕ್ಷಕರ ಸಹವರ್ತಿ ತಂಡವನ್ನು ರೂಪಿಸುವುದು, ಮತ್ತು ಪಠ್ಯಕ್ರಮವನ್ನು ಮುಗಿಸಲೇಬೇಕು ಎನ್ನುವ ಸಂಕುಚಿತ ವ್ಯಾಪ್ತಿಯೊಳಗೆ ನಿಲ್ಲದೆ ಸಡಿಲವಾದ ಪಠ್ಯಕ್ರಮದ ಕೊಂಡಿಯನ್ನು ಕಾಪಾಡುವುದು – ಮುಂತಾದ ಸಲಹೆಗಳನ್ನು ಹದಿಹರೆಯದ ಆರೋಗ್ಯ ಕಾರ್ಯಕ್ರಮದ ತಂಡವು ಮುಂದಿರಿಸಿದೆ. (ಅನು ಗುಪ್ತಾ, ಹೆಲ್ತ್ ಎಜುಕೇಶನ್: ಸಮ್ ಇನ್‌ಸೈಟ್ಸ್)

ಪೌರತ್ವ ಶಿಕ್ಷಣದಲ್ಲಿ ಕ್ರಿಯಾರೂಪಕ್ಕೆ ತರಬಹುದಾದ ಯಾವುದೇ ಒಂದು ನಿರ್ದಿಷ್ಟ ಸೂತ್ರವಿಲ್ಲ ಎನ್ನುವುದು ಸ್ಪಷ್ಟ. ಇಲ್ಲಿ ಅನೇಕ ರೀತಿಯ ಬೆಂಬಲ ಒದಗಿಸುವ ಸಂರಚನೆಗಳಿರಬಹುದು. ಆದರೆ ಸ್ಥಳೀಯ ನೆಲೆಗಟ್ಟಿನ ಹಿನ್ನೆಲೆಯಲ್ಲಿಯೇ ಸಂಘಟನಾತ್ಮಕವಾಗಿ ಕ್ರಿಯೆಯು ರೂಪುಗೊಳ್ಳಬೇಕು. ಇದರ ಮೂಲ ಉದ್ದೇಶವು, ಮಾಮೂಲಿ ಪಠ್ಯಕ್ರಮದ ಚೌಕಟ್ಟಿನ ಹೊರಗೆ ಯೋಚಿಸುವುದು ಮತ್ತು ವಿಷಯವಸ್ತುಗಳಿಗೆ ಪೂರಕವಾಗಿ ಸಮರ್ಪಕವಾದ ಚೌಕಟ್ಟನ್ನು ರೂಪಿಸುವುದಾಗಿದೆ. ಶಿಕ್ಷಕರ ಪಾಲ್ಗೊಳ್ಳುವಿಕೆಯನ್ನು ಆಧರಿಸಿ ಇದನ್ನು ರೂಪಿಸುವುದು, ಅವರ ದೃಷ್ಟಿಕೋನವನ್ನು ಚರ್ಚಿಸುವುದು ಮತ್ತು ಕ್ರಿಯೆಗಾಗಿ ಅವರ ಸ್ವಾಯತ್ತತೆಯನ್ನು ವೃದ್ಧಿಸುವುದು ತುಂಬಾ ಅಗತ್ಯ.

ಈ ಲೇಖನವನ್ನು ದೇವಾಸ್‌ನ ದಿವಂಗತ ಪನ್ನಾ ಲಾಲ್ ಚವ್ಡಾ ಅವರಿಗೆ ಅರ್ಪಿಸಲಾಗಿದೆ.


ಉಲ್ಲೇಖಗಳು

Anu Gupta, *Health Education: Some Insights, in School Health Services in India*, Rama Baru (ed), Sage, 2008, New Delhi.

Poonam Batra, (edited) *Social Science Learning in Schools*, Sage, 2010, New Delhi.

Alex M George, *Political Science Images in Schooling: Personal experiences of the Textbook-making Process, Contemporary Education Dialogue*, 2018, Sage.

Sunil Khilnani, *The Idea of India*, Penguin Books, India, 2012



ಅರವಿಂದ ಸರ್ದಾನಾ ಅವರು 'ಏಕಲವ್ಯ'ದಲ್ಲಿ ಸಮಾಜ ವಿಜ್ಞಾನ ಗುಂಪಿನ ಸದಸ್ಯರಾಗಿದ್ದಾರೆ. ಅವರು ಎನ್.ಸಿ.ಇ.ಆರ್.ಟಿ ಮತ್ತು ಇತರ ರಾಜ್ಯ ಸರ್ಕಾರಗಳ ಪಠ್ಯಪುಸ್ತಕಗಳ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರನ್ನು arvindewas@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** । ಪರಿಶೀಲನೆ: **ಲತಾ ಕೆ.ಸಿ.**